## 4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ

**ಎಸ್.ಸಿ. ನಂ:10007/2023**

**ಚಾಸಾ : 2**

**ಪ್ರಾಸಾ : 5**

| | | |
|---|---|---|
| **ಹೆಸರು** | : | ಹನುಮಕ್ಕ |
| **ಗಂಡನ ಹೆಸರು** | : | ಶ್ರೀನಿವಾಸಯ್ಯ |
| **ವಯಸ್ಸು** | : | 75 ವರ್ಷ |
| **ವೃತ್ತಿ** | : | ವಿಶ್ರಾಂತ ಜೀವನ |
| **ವಾಸ** | : | ಶಾನುಭೋಗನಹಳ್ಳಿ ಗ್ರಾಮ, ಯಲಹಂಕ ತಾಲ್ಲೂಕ್ |

**ಈ ದಿನ ದಿನಾಂಕಃ 13-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ :**

1. 1. ನನಗೆ 9 ಜನ ಮಕ್ಕಳು. ಅವರಲ್ಲಿ ವೆಂಕಟಾಚಲನು ಮೂರನೇ ಮಗನಿರುತ್ತಾನೆ. ಕೊನೆಯ ಮಗನ ಹೆಸರು ನಾರಾಯಣ ಇರುತ್ತದೆ. ವೆಂಕಟಾಚಲನ ಹೆಂಡತಿಯ ಹೆಸರು ಸುಶೀಲಮ್ಮ. ಸುಶೀಲಮ್ಮ ಮತ್ತು ವೆಂಕಟಾಚಲನಿಗೆ ಇಬ್ಬರು ಹೆಣ್ಣು ಮಕ್ಕಳು ಮಾತ್ರ ಇರುತ್ತಾರೆ. ದೊಡ್ಡವಳ ಹೆಸರು ರಕ್ಷಿತಾ ಇರುತ್ತದೆ. ಸಣ್ಣವರ ಹೆಸರು ರಾಶೀ ಇರುತ್ತದೆ. ದೊಡ್ಡ ಮಗಳು ರಕ್ಷಿತಳು ದೊಡ್ಡಬಳ್ಳಾಪುರದ ಕೊಂಗಾಡಿಯಪ್ಪ ಕಾಲೇಜಿಗೆ ಹೋಗುತ್ತಿದ್ದಳು. ಎರಡನೇಯ ಮಗಳ ರಾಶೀ ಯಲಹಂಕದಲ್ಲಿ ಕಾಲೇಜಿಗೆ ಹೋಗುತ್ತಿದ್ದಳು ಆದರೆ ಕಾಲೇಜ್ ಹೆಸರು ಗೊತ್ತಿರುವುದಿಲ್ಲ. ನನ್ನ ಸೊಸೆ ಅಂದರೆ ವೆಂಕಟಾಚಲನ ಹೆಂಡತಿ ಸುಶೀಲಮ್ಮ ಕಾಲೇಜಿಗೆ ಗಾರ್ಡನ್ ಕೆಲಸಕ್ಕೆ ಹೋಗುತ್ತಿದ್ದಳು ಆದರೆ ಯಾವ ಕಾಲೇಜ ಎಂದು ಹೆಸರು ಗೊತ್ತಿರುವುದಿಲ್ಲ. ನಮಗೆ ಸೇರಿದ ಜಮೀನು ನಮ್ಮ ಊರಿನ ಬಳಿ ರಸ್ತೆ ಪಕ್ಕದಲ್ಲಿ ಇರುತ್ತದೆ. ನಾನು ನಮ್ಮ ಜಮೀನಿನಲ್ಲಿ ದನ ಕುರಿಗಳನ್ನು ಮೇಯಿಸಲು ಹೋಗುತ್ತಿದ್ದೆನು. ರಕ್ಷಿತಾ ಮತ್ತು ರಾಶೀಯವರು ಕಾಲೇಜಿಗೆ ಹೋಗುವಾಗ ಹಸುಗಳನ್ನು ಜಮೀನಿನಲ್ಲಿ ಮೇಯಲು ಕಟ್ಟಿ ಹಾಕಿ ಹೋಗುತ್ತಿದ್ದರು ಮತ್ತು ಕಾಲೇಜ್ ಮುಗಿದ ನಂತರ ಮನೆಗೆ ವಾಪಾಸ್ಸು ಬಂದ ಮೇಲೆ ಜಮೀನಿನ ಬಳಿ ಬಂದು ಮೇಯಿಸಲು ಬಿಟ್ಟಿದ್ದ ಹಸುಗಳನ್ನು ಮನಗೆ ಕರೆದುಕೊಂಡು ಬರುತ್ತಿದ್ದರು. ಅವರು ಕಾಲೇಜಿಗೆ ಹೋಗಿ ವಾಪಾಸ್ಸು ಬರುವ ಸಮಯದ ಮದ್ಯದಲ್ಲಿ ಅವುಗಳನ್ನು ನಾನು ನೋಡಿಕೊಳ್ಳುತ್ತಿದ್ದೆನು.
2. ರಾಶೀ ಈಗ ಜೀವಂತ ಇರುವುದಿಲ್ಲ ಅವಳನ್ನು ನ್ಯಾಯಾಲಯದಲ್ಲಿರುವ ಆರೋಪಿ ಕೊಲೆ ಮಾಡಿರುತ್ತಾನೆ. ಸದರಿ ಆರೋಪಿಯನ್ನು ವಿಸಿ ಮೂಲಕ ಹಾಜರುಪಡಿಸಿದ್ದು ವಿಸಿ ಮೂಲಕ ನೋಡಿ ಗುರುತಿಸಿರುತ್ತಾರೆ.

3. ಕಳೆದ ಒಂದೂವರೆ ವರ್ಷಗಳ ಹಿಂದೆ ನಾನು ನಮ್ಮ ಜಮೀನಿನಲ್ಲಿ ಕುರಿ ದನಗಳನ್ನು ಮೇಯಿಸಲು ಹೋಗಿದ್ದೆನು. ಆಗ ನನ್ನ ಜೊತೆಯಲ್ಲಿ ಚಾಸಾ 3 ಮರಿಯಪ್ಪನೂ ಸಹ ಕುರಿ ದನಗಳನ್ನು ಮೇಯಿಸಲು ಜಮೀನಿಗೆ ಬಂದಿದ್ದನು. ಆತನೂ ಸಹ ಅಲ್ಲಿಗೆ ಬಂದಿದ್ದನು. ನಮ್ಮ ಹೊಲದ ಹತ್ತಿರವಿರುವ ಹಳ್ಳದಲ್ಲಿ ಆರೋಪಿಯು ಚಾಕುವಿನಿಂದ ರಾಶಿಗೆ ಚುಚ್ಚುತ್ತಿದ್ದನು. ಚಾಕುವಿನಿಂದ ಚುಚ್ಚುತ್ತಿದ್ದರಿಂದ ರಾಶಿಯು ಬಡಿದುಕೊಳ್ಳುತ್ತಿದ್ದಳು ಆಗ ನಾನು ಮತ್ತು ಮರಿಯಪ್ಪನವರು ಅಲ್ಲಿಗೆ ಬಡಿದುಕೊಂಡು ಹೋಗಿರುತ್ತೇವೆ. ಆಗ ಆರೋಪಿಯು ನಮ್ಮನ್ನು ನೋಡಿ ಬಿಳಿ ಬಣ್ಣದ ಸ್ಕೂಟಿಯಲ್ಲಿ ಓಡಿ ಹೋಗಿರುತ್ತಾನೆ. ಆಗ ಮದ್ಯಾಹ್ನ 03.00 ಗಂಟೆ ಸಮಯ ಆಗಿತ್ತು. ಆರೋಪಿಯು

ರಾಶಿಯ ಕುತ್ತಿಗೆ, ಬೆನ್ನಿಗೆ, ಸೊಂಟಕ್ಕೆ ಮತ್ತು ದೇಹದ ಇತರೆ ಭಾಗಗಳಿಗೆ ಚಾಕುವಿನಿಂದ ಚುಚ್ಚಿರುತ್ತಾನೆ. ನಾವು ಬಡಿದುಕೊಂಡು ಮನೆಗೆ ಹೋಗಿ ನಮ್ಮ ಮಗ ಮಂಜುನಾಥನಿಗೆ ಹೇಳಿರುತ್ತೇವೆ. ರಾಶೀ ಮತ್ತು ಅವರ ತಾಯಿ ಮತ್ತು ಅಕ್ಕ ಮೂರು ಜನರು ದಿಬ್ಬೂರಿನ ಬಳಿ ಜಮೀನಿನಲ್ಲಿ ಚೇಪೆಕಾಯಿ ಕೀಳಲು ಕೂಲಿ ಕೆಲಸಕ್ಕೆ ಹೋಗುತ್ತಿದ್ದರು. ಆಗ ಅಲ್ಲಿಗೆ ಆರೋಪಿಯು ಟೆಂಪೋ ಓಡಿಸಲು ಬರುತ್ತಿದ್ದರಿಂದ ಪರಿಚಯ ಆಗಿತ್ತು ಎಂಬ ವಿಚಾರ ಗೊತ್ತಿತ್ತು. ಯಾವ ವಿಚಾರಕ್ಕೆ ಎಂದು ಕೊಲೆ ಮಾಡಿರುತ್ತಾನೆ ಎಂದು ಗೊತ್ತಿರುವುದಿಲ್ಲ ಆದರೆ ಅವನು ಚುಚ್ಚಿರುವುದನ್ನು ನೋಡಿರುತ್ತೇವೆ ಮತ್ತು ಓಡಿ ಹೋಗಿರುವುದನ್ನು ನೋಡಿರುತ್ತೇವೆ. ಆರೋಪಿ ತಿವಿದಿದ್ದ ಚಾಕು ರಾಶಿಯ ಕುತ್ತಿಗೆಯಲ್ಲಿಯೇ ಇತ್ತು. ಸದರಿ ಚಾಕುವನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸಿರುತ್ತೇನೆ.

**4.** ಈಗ ಹೇಳಿದ ಎಲ್ಲಾ ವಿಚಾರವನ್ನು ಪೋಲಿಸರು ನನ್ನನ್ನು ವಿಚಾರಣೆ ಮಾಡಿದಾಗ ಹೇಳಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರವಾಗಿ ವಕೀಲರನ್ನು ಕರೆಯಲಾಯಿತು ಗೈರು ಹಾಜರಿರುತ್ತಾರೆ ಯಾರೂ ಪ್ರತಿನಿಧಿಸಿರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇರುವುದಿಲ್ಲವೆಂದು ಪರಿಗಣಿಸಲಾಯಿತು.**

(ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ